ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಡಿ ಎಸ್ ಇ ಆರ್ ಟಿ DEPARTMENT OF STATE EDUCATIONAL RESEARCH AND TRAINING
DSERT NO 4, 100 FT RING ROAD, BANASHANKARI 3RD STAGE BENGALURU - 085
E MAIL:dsertkar@gmail.com , Website: http://dsert.kar.nic.in
Phone : 080 26422372 26422373 26422374 Fax:26422377

ಸಂಖ್ಯೆ:ಡಿಪಿಐ.ಡಿಎಸ್ಇಆರ್‌ಟಿ/19/ವಿ.ಕಾ/ಶಾ.ಬ.ಶ/2015-16 ದಿನಾಂಕ:18-06-2015

# ಅಧಿಕೃತ ಜ್ಞಾಪನ

**ವಿಷಯ: ಶಾಲೆಗೆ ಬನ್ನಿ ಶನಿವಾರ, ಕಲಿಯಲು ನೀಡಿ ಸಹಕಾರ ಯೋಜನೆ ಜಾರಿಗೆ ತರುವ ಕುರಿತು.**

ಉಲ್ಲೇಖ:ಸನ್ಮಾನ್ಯ ಶಿಕ್ಷಣ ಸಚಿವರು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಕರ್ನಾಟಕ ಸರ್ಕಾರ ರವರ ಟಿಪ್ಪಣಿ ಸಂಖ್ಯೆ: ಪ್ರಾ&ಪ್ರೌ.ಸ.2163/2015 ದಿನಾಂಕ:27-05-2015.

*******

ರಾಜ್ಯದಲ್ಲಿನ ಬೆಂಗಳೂರು ನಗರ ಮತ್ತು ಇತರ ಜಿಲ್ಲಾ ಕೇಂದ್ರಗಳಲ್ಲಿ ಹಲವಾರು ಖಾಸಗಿ ಹಾಗೂ ಸರ್ಕಾರಿ ಸ್ವಾಮ್ಯದ ಸಾಫ್ಟ್‌ವೇರ್ ಕಂಪನಿಗಳಲ್ಲಿ, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ, ವಿವಿಧ ಇಲಾಖೆಗಳಲ್ಲಿ, ಜೈವಿಕ, ತಾಂತ್ರಿಕ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಗಳಲ್ಲಿ ಪ್ರತಿಭಾನ್ವಿತರು ದುಡಿಯುತ್ತಿದ್ದಾರೆ. ಈ ಸಂಸ್ಥೆಗಳು ಅವರ ಪ್ರತಿಭೆ ಗುರುತಿಸಿ ಉತ್ತಮ ಉದ್ಯೋಗ ನೀಡಿ ಅವರಿಂದ ಸೇವೆ ಪಡೆಯುತ್ತಿವೆ. ಈ ಪ್ರತಿಭಾನ್ವಿತರಲ್ಲಿ ಹೆಚ್ಚು ಮಂದಿ ಗ್ರಾಮಾಂತರ ಪ್ರದೇಶಗಳಿಂದ ಬಂದವರಾಗಿದ್ದು, ಗ್ರಾಮಾಂತರ ಶಾಲಾ ಸಮಸ್ಯೆಗಳ ಅರಿವು ಇರುತ್ತದೆ. ಅವರಲ್ಲಿ ಕೆಲವರಿಗಾದರೂ ತಾವು ಹುಟ್ಟಿ ಬೆಳೆದ ಗ್ರಾಮಗಳಲ್ಲಿನ, ತಾವು ಕಲಿತ ಶಾಲೆಗಳಿಗೆ ಏನಾದರೂ ಸೇವೆ ಮಾಡಬೇಕೆಂಬ ಅದರಲ್ಲೂ ತಾವು ಕಲಿತಿರುವ ವಿಷಯದಲ್ಲಿ ತಮ್ಮ ಹುಟ್ಟೂರಿನಲ್ಲಿ ಅಥವಾ ತಮಗೆ ಸಮೀಪವಿರುವ ಯಾವುದೇ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳಿಗೆ ತಾವು ಕಲಿತಿರುವ ವಿದ್ಯೆಯನ್ನು ದಾನ ಮಾಡಬೇಕೆಂಬ ಹಂಬಲ ಇದ್ದೇ ಇರುತ್ತದೆ. ಅವರಿಗೆ ಅದಕ್ಕಿಂತ ಸಂತೋಷದ ವಿಷಯ ಬೇರೆ ಇಲ್ಲ. ಅವರೆಲ್ಲರೂ ಉತ್ತಮ ಪ್ರತಿಭಾವಂತರಾಗಿದ್ದು ತಾಂತ್ರಿಕ/ಉನ್ನತ ಶಿಕ್ಷಣದಲ್ಲಿ ಪರಿಣತಿ ಪಡೆದಿರುವುದರಿಂದ ಅವರ ಸೇವೆಯ ಅಗತ್ಯತೆ ಗ್ರಾಮಾಂತರ ಶಾಲೆಯ ಮಕ್ಕಳಿಗೆ ಅಗತ್ಯವಿದೆ.

ಸಾಮಾನ್ಯವಾಗಿ ಉದ್ಯೋಗ ಮಾಡುತ್ತಿರುವ ಸಂಸ್ಥೆಗಳಲ್ಲಿ ಕೆಲವು ಸಂಸ್ಥೆಗಳಿಗೆ ಶನಿವಾರದಂದು ರಜೆ ಇದ್ದು, ಅಂದು ನಮ್ಮ ಶಾಲೆಗಳು ಬೆಳಗ್ಗೆ 7.30 ರಿಂದ 12.00 ಗಂಟೆಯವರೆಗೆ ಕೆಲಸ ನಿರ್ವಹಿಸುತ್ತವೆ. ರಜೆ ಇರುವ ಶನಿವಾರಗಳಂದು ಸ್ವಗ್ರಾಮದ ತಾವು ಕಲಿತ ಶಾಲೆಗಳಿಗೆ ತೆರಳಿ ತಾವು ಪರಿಣಿತಿ ಪಡೆದಿರುವ ವಿಷಯಗಳನ್ನು, ಮಕ್ಕಳಲ್ಲಿ ಹಂಚಿಕೊಳ್ಳುವ ಮೂಲಕ ಮಕ್ಕಳ ಕಲಿಕೆಗೆ ಅನುಕೂಲ ಕಲ್ಪಿಸಲು, ಮಕ್ಕಳನ್ನು ಕಲಿಕೆಗೆ ಪ್ರೇರೆಪಿಸಲು ಮಕ್ಕಳಲ್ಲಿ ಆಸಕ್ತಿ, ಆತ್ಮ ವಿಶ್ವಾಸ ಹೆಚ್ಚಿಸಲು ಸಹಾಯ ಮಾಡಬಹುದಾಗಿದ್ದು, ಈ ಉದ್ದೇಶಕ್ಕಾಗಿ ಶಿಕ್ಷಣ ಇಲಾಖೆ/ಇತರೆ ಇಲಾಖೆ/ ವಿವಿಧ ಕ್ಷೇತ್ರಗಳಲ್ಲಿ ಕೆಲಸ ನಿರ್ವಹಿಸುತ್ತಿರುವ, ಪ್ರತಿಭಾನ್ವಿತ ಆಸಕ್ತರಿಗೆ ಕೆಲವು ನಿಬಂಧನೆಗಳೊಂದಿಗೆ ಅವಕಾಶ ಕಲ್ಪಿಸಲು ಉದ್ದೇಶಿಸಿದ್ದು- **ಶಾಲೆಗೆ ಬನ್ನಿ ಶನಿವಾರ, ಕಲಿಯಲು ನೀಡಿ ಸಹಕಾರ**- ಎಂಬ ವಿನೂತನ ಕಾರ್ಯಕ್ರಮ ರೂಪಿಸಲಾಗಿದೆ.

**ನಿಬಂಧನೆಗಳು:**

- ಅವರು ಹುಟ್ಟಿದ ಊರು, ಅವರು ವ್ಯಾಸಂಗ ಮಾಡಿದ ಶಾಲೆ ಅಥವಾ ಅವರು ಬಯಸುವ ಯಾವುದೇ ನಗರ/ಗ್ರಾಮಾಂತರ ಪ್ರದೇಶಗಳ ಸರ್ಕಾರಿ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿದೆ.

- ಆಯ್ಕೆ ಮಾಡಿಕೊಂಡ ಶಾಲೆಯ ಮುಖ್ಯ ಶಿಕ್ಷಕರಿಗೆ ಪೂರ್ವಭಾವಿಯಾಗಿ ಅವರು ಕೆಲಸ ನಿರ್ವಹಿಸುತ್ತಿರುವ ಅಧಿಕೃತ ಸಂಸ್ಥೆಯ ವಿಳಾಸದ ಗುರುತು ಪತ್ರದೊಂದಿಗೆ (ಭಾವಚಿತ್ರವಿರುವ) ಮನವಿ ಸಲ್ಲಿಸಿ ಅನುಮತಿ ಪಡೆಯಬೇಕು.
- ಅವರ ಮನವಿಯಲ್ಲಿ ಅವರ ವಿದ್ಯಾರ್ಹತೆ, ಅವರು ಮಕ್ಕಳಲ್ಲಿ ಹಂಚಿಕೊಳ್ಳಲು/ಹೇಳಿಕೊಡಲು ಬಯಸುವ ವಿಷಯ, ಶಾಲೆಗೆ ಬರುವ ಶನಿವಾರಗಳ ವಿವರ ನೀಡಬೇಕು.
- ಶಾಲೆಯಲ್ಲಿ ಇರಲು ಬಯಸುವ ಅವಧಿ, ಇತ್ಯಾದಿ ವಿಷಯ ನಮೂದಿಸಬೇಕು. ಅವರ ಕಛೇರಿ ವಿಳಾಸ, ಮಿಂಚಂಚೆ, ಮೊಬೈಲ್/ದೂರವಾಣಿ ಸಂಖ್ಯೆಯ ವಿವರ ನೀಡಬೇಕು.
- ಶಾಲೆಗೆ ಬರಲು ಒಪ್ಪಿಕೊಂಡ ಶನಿವಾರಗಳಲ್ಲಿ ತಪ್ಪದೇ ಬರಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಅನಿವಾರ್ಯ ಕಾರಣಗಳಿಂದ ಬರಲಾಗದಿದ್ದಲ್ಲಿ ಪೂರ್ವಭಾವಿಯಾಗಿ ಮುಖ್ಯ ಶಿಕ್ಷಕರಿಗೆ ಮಾಹಿತಿ ನೀಡುವುದು.
- ಶಾಲೆಗೆ ಭೇಟಿ ನೀಡಿದ ವೇಳೆ ಮುಖ್ಯ ಶಿಕ್ಷಕರೊಂದಿಗೆ ಚರ್ಚಿಸಿ, ಪಠ್ಯ ವಿಷಯ ಅಥವಾ ಪಠ್ಯದಲ್ಲಿನ ಬೋಧನಾ ಅಂಶಗಳಿಗೆ ಅನುಕೂಲವಾಗುವ ಪೂರಕ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವುದು.
- ಶಾಲೆಗಳಲ್ಲಿ ಮಕ್ಕಳು ಕಲಿಯಲು ಕೊರತೆ ಇರುವ/ಕಷ್ಟವೆನಿಸಿರುವ ಆಂಗ್ಲ ಭಾಷೆ, ವಿಜ್ಞಾನ, ಗಣಿತ, ಸಾಮಾನ್ಯ ಜ್ಞಾನ, ಕ್ರೀಡಾ ವಿಷಯಗಳು ಅಥವಾ ಅದಕ್ಕೆ ಪೂರಕವಾದ ಮಕ್ಕಳ ವಿಷಯ ಜ್ಞಾನ ವಿಸ್ತಾರಕ್ಕೆ ಅನುಕೂಲಕಾರವಾದ ವಿಷಯಗಳನ್ನು ಮಕ್ಕಳು ಕಲಿಯಲು ಅನುಕೂಲವಾಗುವಂತೆ ಮಾರ್ಗದರ್ಶನ ನೀಡುವುದು.
- ಮಕ್ಕಳ ಹಕ್ಕುಗಳು ಹಾಗೂ ಮಕ್ಕಳ ಶಾಲಾ ಸುರಕ್ಷತೆ ಬಗ್ಗೆ ರಚಿಸಿರುವ ಯಾವುದೇ ನಿಯಮಗಳಿಗೆ ಚ್ಯುತಿ ಬರದ ಹಾಗೆ ಶಾಲೆಯಲ್ಲಿರುವ ವೇಳೆ ನಡೆದುಕೊಳ್ಳಬೇಕು. ಈ ಕುರಿತು ಮುಖ್ಯ ಶಿಕ್ಷಕರಿಗೆ ನೀಡುವ ಮನವಿಯಲ್ಲಿ ದಾಖಲಿಸಬೇಕು. ಅವರ ಬೋಧನಾ ವೇಳೆ ಒರ್ವ ಶಿಕ್ಷಕರು ಆ ತರಗತಿಯಲ್ಲಿದ್ದು ಸಹಕರಿಸಲು ತಿಳಿಸಬೇಕು.
- ಈ ಉದ್ದೇಶದ ಸೇವೆಯನ್ನು ಉಚಿತವಾಗಿ ನೀಡಬೇಕಿದ್ದು, ಯಾವುದೇ ಸಂಭಾವನೆ ಇರುವುದಿಲ್ಲ.

ಈ ಮೇಲಿನ ನಿಬಂಧನೆ ಅನುಸರಿಸಲು ಬಯಸುವ ಆಸಕ್ತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಬಹುದಾಗಿದೆ. ಈ ಅವಕಾಶವನ್ನು ಉಪಯೋಗಿಸಿಕೊಂಡು ಪ್ರಮುಖವಾಗಿ ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳ ಕಲಿಕೆಗೆ, ಅವರ ಪ್ರತಿಭೆ ಅನಾವರಣಗೊಳಿಸಲು ಇಲಾಖೆಯೊಡನೆ ಸಹಕರಿಸಲು ಕೋರಿದೆ.

ಎಸ್. ಜಯಕುಮಾರ್,
ನಿರ್ದೇಶಕರು,
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ.
ಬೆಂಗಳೂರು-85.

ಪ್ರತಿಯನ್ನು:

1. ರಾಜ್ಯದ ಎಲ್ಲಾ ಪ್ರಾಂಶುಪಾಲರು ಸಿಟಿಇ ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ತಮ್ಮ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅಗತ್ಯ ಸೂಚನೆ ನೀಡಲು ಹಾಗೂ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರು (ಅಭಿವೃದ್ಧಿ) ರವರಿಗೆ ಅಗತ್ಯ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಯ ಮುಖ್ಯ ಶಿಕ್ಷಕರುಗಳಿಗೆ ಅಗತ್ಯ ಸೂಚನೆ ನೀಡಲು ಹಾಗೂ ಸೂಕ್ತ ಕ್ರಮಕ್ಕಾಗಿ.

D:\p4comp32\y15-16\Shalege bani Shanivara.docx